ಎಂದು ನನಗೆ ಅರ್ಥವಾಗುತ್ತಿಲ್ಲ.

(ಮಾನ್ಯ ಸದಸ್ಯರಾದ ಬಸವರಾಜು, ಪಾಪಣ್ಣ ಮತ್ತು ರಾಮದಾಸ್ ಅವರು ಧರಣಿ ಕೈ ಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಈ) ಗದಗ್ ಜಿಲ್ಲೆ ಮುಡರಗಿ ತಾಲ್ಲೂಕಿನ ಕೆಸರೂರು ಗ್ರಾಮ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲಿ ನಡೆದ ಗಲಭೆ;

ಶ್ರೀ ಎಸ್.ಎಸ್.ಪಾಟೀಲ್ (ಮುಂಡರಿ): ಗದಗ್ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೆಸರೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಆಲ್ಲಿದ್ದ ಎಲೆಕ್ಷನ್ ಆಫೀಸರ್‌ನ್ನು ಹೊಡೆದು, ಸರ್ಕಾರಿ ಜೀಪನ್ನು ಸುಟ್ಟು, ಆಮೇಲೆ ನಮ್ಮ ಪಕ್ಷದ ಅಧ್ಯಕ್ಷರನ್ನು ಹೊಡೆಯಲಿಕ್ಕೆ ಹೋಗಿದ್ದರೂ ಸಹ ಇವತ್ತಿನವರೆಗೂ ಸರ್ಕಾರ ಅವರ ಮೇಲೆ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಅದಾದ ಮೇಲೆ ಇವರನ್ನು ಸರ್ಕಾರ ಹಾಗೆಯೇ ಬಿಟ್ಟ ಕಾರಣ ಸುಲ್ತಾನ್ ಎನ್ನುವ ಗ್ರಾಮದಲ್ಲಿಯು ಅರ್ಜಿ ಕೊಡಲು ಹೋಗಲು ಸಹ ಬಿಡಲಿಲ್ಲ. ಅಧ್ಯಕ್ಷರ ಚುನಾವಣೆಗೆ ಅರ್ಜಿ ಕೊಡಲು ಹೋಗುವವರಿಗೆ ತಕರಾರು ಮಾಡಿ ತಮ್ಮದು ಒಂದೇ ಅರ್ಜಿ ಬರುವಂತೆ ಮಾಡಿ ಅವಿರೋಧವಾಗಿ ಆಯ್ಕೆಯಾದಂತೆ ಮಾಡಿಕೊಂಡರು ಅದು ಕೋರ್ಟ್‌ನಲ್ಲಿ ನಡೆಯುತ್ತಿದೆ. ಅಲ್ಲಿ ಒಂದು ದೊಡ್ಡ ಗಲಭೆಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಸರ್ಕಾರ ಈ ಎರಡೂ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ ಈಗತಾನೇ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾಳೆ ಉತ್ತರ ಕೊಡಿಸುತ್ತೇನೆ.

ಆಲಮಟ್ಟಿ ಅಣೆಕಟ್ಟೆಯಿಂದ ಮುಳಗಡೆಯಾಗತಕ್ಕಂಥ ಹಲವಾರು ಗ್ರಾಮಗಳಿಗೆ ಪರಿಹಾರ

ಶ್ರೀ ಸಂಗೊಳ್ಳಿ ಕೆ ಬೆಳ್ಳುಬ್ಬಿ: ಮಾನ್ಯ ಅಧ್ಯಕ್ಷರೆ ಆಲ್ಮಟ್ಟಿ ಮುಳುಗಡೆಯಾಗತಕ್ಕಂಥ ಹಲವಾರು ಗ್ರಾಮಗಳಲ್ಲಿ ಕೆಲವು ಕಟ್ಟಡಗಳಿಗೆ ಇದುವರೆಗೂ ಪರಿಹಾರವನ್ನು ಕೊಟ್ಟಿಲ್ಲ. ಅಂದರೆ ಕೋಲಾರದಲ್ಲಿ ಸುಮಾರು 500 ಕಟ್ಟಡ. ಬಾಗೇವಾಡಿ ತಾಲ್ಲೂಕು, ಬಿಜಾಪುರ ತಾಲ್ಲೂಕು ಕಡಲೂರುನಲ್ಲಿ ಸುಮಾರು 40 ಕಟ್ಟಡ. ಬೀಳಗಿ ತಾಲ್ಲೂಕು ಕೊರ್ತಿಯಲ್ಲಿ ಸುಮಾರು 30 ಕಟ್ಟಡ. ಬೀಳಗಿ ಕ್ಷೇತ್ರದ ಚಿಮ್ಮನಗಿಯಲ್ಲಿ ಸುಮಾರು 30 ಕಟ್ಟಡ. ಇವು ಅನಧಿಕೃತ ಕಟ್ಟಡಗಳು ಅಂತ ಹೇಳಿ ಸರ್ಕಾರ ಪರಿಹಾರವನ್ನು ಕೊಟ್ಟಿಲ್ಲ. ಆದರೆ ಮುಳುಗಡೆಯಾಗಿರತಕ್ಕಂಥದ್ದರಲ್ಲಿ 4(1) ನೋಟಿಫಿಕೇಶನ್ ಆಗದೇ ಇರುವಂತಹ ಮನೆಗಳಿಗೆ ಅನಧಿಕೃತ ಕಟ್ಟಡಗಳು ಎನ್ನುವಂತಹ ಒಂದು ತಲೆಬರಹವನ್ನು ಕೊಡುತ್ತಿದ್ದಾರೆ. ಆದರೆ ಅದೇ ಬಾಗಲಕೋಟೆ ನಗರದಲ್ಲಿ ಹೋದ ಸರ್ಕಾರ ಅಲ್ಲಿರತಕ್ಕಂಥ ಅನಧಿಕೃತ ಕಟ್ಟಡಗಳಿಗೂ ಸಹ ಪರಿಹಾರವನ್ನು ಕೊಡಬೇಕೆಂದು ಏನು ನಿರ್ಣಯ ಮಾಡಿದೆ ಆ ಪ್ರಕಾರ ಕೋಲಾರದಲ್ಲಿ ಸುಮಾರು 1498 ಕಟ್ಟಡಗಳಿಗೆ ಮೂರು ಕಂಡೀಷನ್ಸ್ ಮೇಲೆ ಪರಿಹಾರ ಸಿಕ್ಕಿತು. ಕೋರ್ಟಿನಲ್ಲಿ ಅವರಿಗೆ ಸಿಗಬೇಕಾದಂತಹ ಪರಿಹಾರ ಸಿಗಲಿಲ್ಲ. ಆಮೇಲೆ 318 ಕಟ್ಟಡಗಳಿಗೆ ಎರಡು ವರ್ಷಗಳ ಹಿಂದೆ ಮತ್ತೊಂದು ಫೋರ್‌ಒನ್

ನೋಟಿಫಿಕೇಶನ್ ಮಾಡಿದ್ದಾರೆ. ಅದರಲ್ಲಿ 318 ಕಟ್ಟಡಗಳು ಇದ್ದರೂ ಸಹ 150 ಕಟ್ಟಡಗಳಿಗೆ ಮಾತ್ರ ಪರಿಹಾರ ಕೊಟ್ಟು ಉಳಿದ ಕಟ್ಟಡಗಳು ಬಯಲು ಪ್ರದೇಶದಲ್ಲಿವೆ ಅಂತ ತಿಳಿದುಕೊಂಡಿದ್ದಾರೆ. ಇನ್ನು 400 ಕಟ್ಟಡಗಳಿಗೆ ಫೋರ್‌ಒನ್ ಆಗಿಲ್ಲ. ಅಲ್ಟ್ಟಿ ಯೋಜನೆ ಸುಮಾರು 40 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಈ ಅವಧಿಯಲ್ಲಿ ಆಗ ಇದ್ದಂತಹ ಒಬ್ಬ ತಂದೆಗೆ ಸುಮಾರು 3-4 ಜನ ಮಕ್ಕಳು ಇರುತ್ತಾರೆ. ಅವರು ದೊಡ್ಡವರಾದ ಮೇಲೆ ಅವರಿಗೆ ಮದುವೆಯಾದ ಮೇಲೆ ವಾರಕ್ಕೆ ಒಬ್ಬರು ಮನೆಯಲ್ಲಿ ಮಲಗುವ ಪರಿಸ್ಥಿತಿ ನಿರ್ಮಾಣವಾಯಿತು. ಡ್ಯಾಮ್‌ಗೆ ಅಡಿಗಲ್ಲು ಇಟ್ಟಾಗ ತಂದೆ ವಯಸ್ಸಿಗೆ ಬಂದು ಮದುವೆಯಾಗಿದ್ದರೆ ಈಗ ಅವರ ಮೊಮ್ಮಕ್ಕಳಿಗೂ ಸಹ ಮದುವೆಯಾಗಿದೆ. ಅವರು ಒಂದೇ ಮನೆಯಲ್ಲಿ ವಾಸ ಮಾಡಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಅವರು ತಮ್ಮ ಅನುಕೂಲಕ್ಕಾಗಿ ಒಂದು ಮನೆಯನ್ನು ಕಟ್ಟಿಕೊಂಡಿದ್ದಾರೆ. ಈ ರೀತಿ ಕಟ್ಟಿಕೊಂಡಿರುವವರು ಎಲ್ಲರೂ ಕೂಲಿ ಕಾರ್ಮಿಕರು ಮತ್ತು ರೈತರು, ಅವು ಸಣ್ಣ ಸಣ್ಣ ಕಟ್ಟಡಗಳು. ಅವೆಲ್ಲಾ ಸೇರಿದರೂ ಸಹ ಒಂದು ಸಾವಿರ ಕಟ್ಟಡಗಳು ಆಗುತ್ತವೆ. ಸರ್ಕಾರಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಬರಬಹುದು, ಇದು ಬಹಳ ದೊಡ್ಡ ಮೊತ್ತವೇನೂ ಅಲ್ಲ. ಆ ದೃಷ್ಟಿಯಿಂದ ಆ ಎಲ್ಲಾ ಕಟ್ಟಡಗಳಿಗೂ ಮಾನವೀಯತೆ ದೃಷ್ಟಿಯಿಂದ ಪರಿಹಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಯಾವುದಾದರೂ ಸ್ಪೆಸಿಫಿಕ್ ಆಗಿ ಇರುವಂತಹ ವಿಚಾರಕ್ಕೆ ತುರ್ತಾಗಿ ಸರ್ಕಾರ ಗಮನ ಹರಿಸಬೇಕಾಗಿರುವಂತಾದ್ದು ಇದ್ದರೆ ಮಾತ್ರ ಕೊಡಬೇಕು. ಅವರು ಸಮಗ್ರವಾದ ನೀತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಬಹುಶಃ ನೀರಾವರಿ ಇಲಾಖೆ ಬೇಡಿಕೆ ಬಂದಾಗ ಪ್ರಸ್ತಾಪ ಮಾಡುವುದು ಒಳ್ಳೆಯದು.

ಊ) ಹಾಸನದ ಡೈರಿಯಲ್ಲಿ ಅವ್ಯವಹಾರ.

ಶ್ರೀ ಕೆ.ಎಚ್.ಹನುಮೇಗೌಡ (ಹಾಸನ): ಮಾನ್ಯ ಅಧ್ಯಕ್ಷರೆ, ಡೈರಿ ಪೊಲೀಸಿನವರನ್ನು ಹಾಕಿದ್ದಾರೆ. ಹೊರಗಡೆಯಿಂದ ಕಾರ್ಮಿಕರನ್ನು ಕರೆಸಿದ್ದಾರೆ. ಇರತಕ್ಕಂಥ ಕಾರ್ಮಿಕರು ಹೊರಗಡೆ ಹೋಗಿದ್ದಾರೆ. ನಾಳೆಯಿಂದ ಹಾಲು ವಿತರಣೆ ಇಲ್ಲ, ಕಲೆಕ್ಷನ್ ಇಲ್ಲ. ನಾಳೆ ಒಂದು ದೊಡ್ಡ ಆಘಾತವಾಗುವಂತಹ ಸಂಭವ ಇದೆ. ನಾನು 15 ದಿವಸಗಳಿಂದ ಗಮನ ಸೆಳೆಯುವ ಸೂಚನೆ ಕೊಟ್ಟು ಕೇಳುತ್ತಿದ್ದೇನೆ. ಈಗ ಮಾನ್ಯ ಮಂತ್ರಿಗಳು ಇದ್ದಾರೆ. ಇದಕ್ಕೆ ನಾಳೆ ಏನು ಉತ್ತರ ಕೊಡುತ್ತಾರೋ ಕೊಡಲಿ. ಹಾಸನದಲ್ಲಿ ಕಳೆದ 15-20 ವರ್ಷಗಳಿಂದ ಡೈರಿ ಇದೆ. ಈಗ ಕಳೆದ 7-8 ವರ್ಷಗಳಹಿಂದೆ ಒಬ್ಬರು ಅಲ್ಲಿ ಅಧ್ಯಕ್ಷರಾಗಿ ಅವರ ಸಂಬಂಧಿಕರೊಬ್ಬರು ಎಸ್.ಎಸ್.ಎಲ್.ಸಿ.ಫೇಲ್ ಆಗಿರುವವರನ್ನು ಮೂರು ವರ್ಷಗಳಲ್ಲಿ 6 ಜನರನ್ನು ಆಫೀಸರ್ಸ್ ಮಾಡಿ ಏಳೂವರೆ ಎಂಟು ಸಾವಿರ ಸಂಬಳ ಕೊಡುತ್ತಿದ್ದಾರೆ. ಅಲ್ಲಿ ಒಬ್ಬ ಪದವೀಧರ ಕಳೆದ 20 ವರ್ಷಗಳಿಂದ ಹೆಲ್ಪರ್ ಆಗಿ ಕ್ಯಾನ್ ತೊಳೆಯುತ್ತಿದ್ದಾರೆ. ಅಮೇಲೆ ಸುಮಾರು 60-70 ಜನ ಅವರ ಸಂಬಂಧಿಕರನ್ನು ಕಾನೂನು ಬಾಹಿರವಾಗಿ ನೇಮಕ ಮಾಡಿಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ 8-40 ಪೈಸೆ ಒಂದು ಲೀಟರ್‌ಗೆ ಕಲೆಕ್ಷನ್‌ಗೆ ದುಡ್ಡು ಕೊಟ್ಟರೆ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಯ ರೈತರಿಗೆ 7-40 ಪೈಸೆ ಒಂದು ಲೀಟರ್‌ಗೆ ಕೊಡುತ್ತಿದ್ದಾರೆ. ಒಂದು ಕಡೆ